7) **ವಿಷಯ : ಜೋಯಿಡಾ ತಾಲ್ಲೂಕಿನಲ್ಲಿ ಸೂಪಾ ಡ್ಯಾಂ ನಿರ್ಮಾಣ ಮಾಡುವ ಸಮಯದಲ್ಲಿ ಮುಳುಗಡೆಯಾಗಿರುವ ಹಳ್ಳಿಗಳ ನಿರಾಶ್ರಿತರಿಗೆ ಪುನರ್ ವಸತಿ ಮತ್ತು ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಲ್ಲದಿರುವ ಬಗ್ಗೆ**

ಶ್ರೀ ಸುನೀಲ್ ವಿ ಹೆಗಡೆ (ಹಳಿಯಾಳ) : ಮಾನ್ಯ ಅಧ್ಯಕ್ಷರೆ, ಜೋಯಿಡಾ ತಾಲ್ಲೂಕಿನಲ್ಲಿ ಸೂಪಾ ಡ್ಯಾಂ ನಿರ್ಮಾಣ ಮಾಡುವ ಸಮಯದಲ್ಲಿ ಮುಳುಗಡೆಯಾಗಿರುವ ಹಳ್ಳಿಗಳ ನಿರಾಶ್ರಿತರಿಗೆ ಪುನರ್ ವಸತಿ ಮತ್ತು ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಲ್ಲದಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುತ್ತೇನೆ.

ಅಧ್ಯಕ್ಷರು : ಉತ್ತರದ ಪ್ರತಿಯನ್ನು ಕೊಟ್ಟಿದ್ದಾರೆ. ತಾವು ಕ್ಲಾರಿಫಿಕೇಷನ್ ಕೇಳಿ ಸಾಕು.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯ ಮಂತ್ರಿಗಳ ಪರವಾಗಿ) : ಕಾಳಿ ಜಲವಿದ್ಯುತ್ ಯೋಜನೆಯ/ಸೂಪಾ ಡ್ಯಾಂ ಕಾಮಗಾರಿಯು 1975ರಲ್ಲಿ ಪ್ರಾರಂಭವಾಯಿತು. ಈ ಯೋಜನೆಯಿಂದ ಭಾದಿತರಾದ ಒಟ್ಟು 47 ಗ್ರಾಮಗಳಲ್ಲಿ 5552 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲಾಗಿದೆ. ಈ ಯೋಜನೆಯಿಂದ ಪೂರ್ಣ ಪ್ರಮಾಣದಲ್ಲಿ 28 ಗ್ರಾಮಗಳು ಹಾಗೂ ಭಾಗಶಃ ಪ್ರಮಾಣದಲ್ಲಿ 21 ಗ್ರಾಮಗಳು ಬಾಧಿತಗೊಂಡಿರುತ್ತವೆ. ಒಟ್ಟು 1500 ಕುಟುಂಬಗಳು ಸಂತ್ರಸ್ಥರಾಗಿರುತ್ತಾರೆ.

ಈ ಯೋಜನೆಯಿಂದ ಸಂತ್ರಸ್ಥರಾದವರಿಗೆ 3455 ಎಕರೆ ಕೃಷಿ ಜಮೀನನ್ನು ಹಂಚಿಕೆ ಮಾಡಲಾಗಿದೆ ಹಾಗೂ ಈ ಯೋಜನೆಯಡಿ ಪುನರ್ವಸತಿ ಅನುದಾನ ಪಡೆದ ಕುಟುಂಬಗಳ ಸಂಖ್ಯೆ: 124 ಆಗಿರುತ್ತವೆ. ಈ ಯೋಜನೆಯಡಿ ಸಂತ್ರಸ್ಥರಾದ ಕುಟುಂಬಗಳಿಗೆ ರಾಮನಗರದಲ್ಲಿ ಹಾಗೂ ಇತರೆ 3 ಕಡೆ ಪುನರ್ವಸತಿ ಕೇಂದ್ರಗಳನ್ನು ಸ್ಥಾಪನೆ ಮಾಡಲಾಗಿದೆ. ಸಂತ್ರಸ್ಥಗೊಂಡ ನಿರಾಶ್ರಿತರಿಗೆ ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಪುನರ್ವಸತಿ ಕೇಂದ್ರಗಳಲ್ಲಿ ಉಚಿತವಾಗಿ 3 ಹಂತಗಳಲ್ಲಿ 1132 ನಿವೇಶನಗಳನ್ನು ನೀಡಿದೆ. ಇದಲ್ಲದೆ 11 ಹೋಟೆಲ್ ನಿವೇಶನಗಳು ಮತ್ತು 141 ಅಂಗಡಿ ನಿವೇಶನಗಳನ್ನು ವಿವಿಧ ಜಾಗಗಳಲ್ಲಿ ಒದಗಿಸಲಾಗಿದೆ. ನಿವೇಶನಗಳನ್ನು ಹಲವು ಇಲಾಖೆಗಳಿಗೆ ಕಟ್ಟಡಗಳನ್ನು ಕಟ್ಟಿಕೊಳ್ಳುವುದಕ್ಕೆ ವಿತರಿಸಲಾಗಿದೆ. ಹಲವು ಪ್ರದೇಶಗಳನ್ನು ಶಿಕ್ಷಣ, ಧಾರ್ಮಿಕ ಕೇಂದ್ರ ಹಾಗೂ

ಇತರೆ ಉಪಯೋಗಕ್ಕಾಗಿ ಗುರುತಿಸಲಾಗಿದೆ. ಅವುಗಳಲ್ಲಿ ರಾಮಲಿಂಗ ದೇವಸ್ಥಾನ, ಚರ್ಚ್, ಮಸೀದಿ ಸಭಾ ಭವನ/ಮಾರುತಿ ದೇವಸ್ಥಾನ ಇತರೆ ಕಟ್ಟಡಗಳನ್ನು ಸಂಬಂಧಪಟ್ಟ ಧಾರ್ಮಿಕ ಸಮಿತಿಗಳಿಗೆ ನೀಡಲಾಗಿದೆ. ಈ ಪುನರ್ವಸತಿ ಸೌಲಭ್ಯಗಳನ್ನು ಕಲ್ಪಿಸಲು ರೂ. 385.15 ಲಕ್ಷಗಳನ್ನು ಅನುದಾನವನ್ನಾಗಿ ಒದಗಿಸಲಾಗಿದೆ. ಈ ವೆಚ್ಚವನ್ನು ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಭರಿಸಿರುತ್ತದೆ.

ಸಂತ್ರಸ್ಥ ಕುಟುಂಬಗಳಿಗೆ ರಾಮನಗರ ಪುನರ್ವಸತಿ ಕೇಂದ್ರದಲ್ಲಿ ಪೂರೈಸಬೇಕಾದ ಅತ್ಯವಶ್ಯಕ ಬೇಡಿಕೆಗಳನ್ನು ಹಾಗೂ ಸೂಪಾ ಹಿನ್ನೀರಿನಿಂದ ಬಾಧಿತರಾದ ಅನೇಕ ಗ್ರಾಮಸ್ಥರಿಗೆ ರಸ್ತೆ ಸಂಪರ್ಕ ಒದಗಿಸುವುದು, ಸೇತುವೆ ನಿರ್ಮಾಣ ಮಾಡುವ ಪ್ರದೇಶ, ಅರಣ್ಯ ಇಲಾಖೆಯ ಹುಲಿಧಾಮದ ವ್ಯಾಪ್ತಿಗೆ ಸೇರಿದ ಅರಣ್ಯ ಇಲಾಖೆಯ ಅನುಮತಿ, ಬಾಕಿ ಉಳಿದಿದ್ದ ವಿದ್ಯುತ್ ಶುಲ್ಕ ಹಾಗೂ ಬಡ್ಡಿಯನ್ನು ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಭರಿಸಬೇಕೆಂದು ಮತ್ತು ಇನ್ನಿತರ ಬೇಡಿಕೆಗಳ ಕುರಿತಂತೆ ದಿನಾಂಕ: 31.01.2012 ರಂದು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಲಾಗಿದೆ.

ಈ ಸಭೆಯಲ್ಲಿ ಪುನರ್ವಸತಿ ಕೇಂದ್ರಗಳನ್ನು ಈ ಹಿಂದೆಯೇ ಜಿಲ್ಲಾ ಪಂಚಾಯತ್, ಕಾರವಾರಕ್ಕೆ ನಿರ್ವಹಣೆಗಾಗಿ ಹಸ್ತಾಂತರಿಸಲಾಗಿರುವ ಅಂಶವನ್ನು ಪ್ರಸ್ತಾಪಿಸಲಾಗಿರುತ್ತದೆ. ಆದಾಗ್ಯೂ ಹಿನ್ನೀರಿನಿಂದ ಭಾದಿತರಾದ ಸಂತ್ರಸ್ಥರಿಗೆ ಅರಣ್ಯ ಪ್ರದೇಶದಲ್ಲಿ ಅವಶ್ಯಕ ರಸ್ತೆ ಸಂಪರ್ಕ, ಸೇತುವೆ ನಿರ್ಮಾಣದ ಬಗ್ಗೆ ಅರಣ್ಯ ಇಲಾಖಾ ಅಧಿಕಾರಿಗಳ ಪರಿಶೀಲನಾ ಕಾರ್ಯ ಕೈಗೊಳ್ಳಬೇಕೆಂದು ಹಾಗೂ ಪುನರ್ವಸತಿ ಕೇಂದ್ರ ಹಸ್ತಾಂತರಿಸುವ ಸಮಯ ದಲ್ಲಿ ಬಾಕಿ ಇದ್ದ ವಿದ್ಯುತ್ ಶುಲ್ಕವನ್ನು ಕರ್ನಾಟಕ ವಿದ್ಯುತ್ ನಿಗಮವು ಭರಿಸಬೇಕೆಂಬ ಬಗ್ಗೆ ಹಾಗೂ ಪುನರ್ವಸತಿ ಕೆಂದ್ರವಲ್ಲಿನ ರಸ್ತೆಗಳ ಮರು ಡಾಂಬರೀಕರಣ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಚರ್ಚಿಸಲಾಗಿರುತ್ತದೆ. ಅಂತಿಮವಾಗಿ ಪುನರ್ವಸತಿ ಕೇಂದ್ರದಲ್ಲಿ ಜಿಲ್ಲಾ ಪಂಚಾಯತ್ ವತಿಯಿಂದ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ ಕ್ರಿಯಾ ಯೋಜನೆ ತಯಾರಿಸಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಆಯವ್ಯಯ ಅನುದಾನದ ಪಟ್ಟಿಯಲ್ಲಿ ಅನುದಾನ ಕಾಯ್ದಿರಿಸಿ ಕ್ರಮಕೈಗೊಳ್ಳಲು ಜಿಲ್ಲಾ ಪಂಚಾಯತ್‌ಗೆ ಸೂಚಿಸಲಾಗಿದೆ. ಈ ಬಗ್ಗೆ ಜಿಲ್ಲಾ ಪಂಚಾಯತ್‌ನ್ನ ವಾರ್ಷಿಕ ಆಯವ್ಯಯದಲ್ಲಿ ಅನುದಾನ ಒದಗಿಸಿಕೊಂಡು ಪುನರ್ವಸತಿ ಕೇಂದ್ರಗಳಲ್ಲಿ

ಕಲ್ಪಿಸಬೇಕಾಗಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಬೇಕಾಗಿರುತ್ತದೆ.

ಶ್ರೀ ಸುನೀಲ್ ವಿ. ಹೆಗಡೆ : ಮಾನ್ಯ ಅಧ್ಯಕ್ಷರೆ, ಈ ಹಿಂದೆ ಸದನದಲ್ಲಿ ಅರ್ಧಗಂಟೆ ಅವಧಿಯಲ್ಲಿ ಈ ವಿಷಯ ಚರ್ಚೆಯಾದಾಗ ಕಾಳಿ ನದಿಯ ಸೂಪಾ ಡ್ಯಾಂ ನಿರ್ಮಾಣದಿಂದ ಮುಳುಗಡೆಯಾದಂಥ ನಿರಾಶ್ರಿತರಿಗೆ ಪುನರ್‌ವಸತಿ ಮತ್ತು ಮೂಲಭೂತ ಸೌಕರ್ಯಗಳ ಬಗ್ಗೆ ಇಂಧನ ಸಚಿವರು ಈಗಾಗಲೇ ಒಂದು ಕಮಿಟಿ ಸಭೆಯನ್ನು ಮಾಡಿ ಇದರ ಬಗ್ಗೆ ಒಂದು ಮೂವ್‌ಮೆಂಟ್ ಮಾಡಿದ್ದಾರೆ. ಆದರೆ, ಇವತ್ತಿನ ದಿವಸ ಕೆಪಿಸಿ ಯ ಅಧ್ಯಕ್ಷರಾಗಿ ಸನ್ಮಾನ್ಯ ಮುಖ್ಯಮಂತ್ರಿಯವರು ಇರುವುದರಿಂದ ಒಂದು ವಿಷಯ ಹೇಳುವುದಕ್ಕೆ ಬಯಸುತ್ತೇನೆ. ಅದೇನೆಂದರೆ, ಈ ಫೈಲ್ 2002 ರಲ್ಲಿ ಮುಕ್ತಾಯವಾಗಿರುವುದರಿಂದ ಸಮಸ್ಯೆಯಾಗುತ್ತಿದೆ ಎಂದು ಹೇಳುತ್ತಿದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸುನೀಲ್ ವಿ. ಹೆಗಡೆಯವರು ಸೂಪಾ ಡ್ಯಾಂ ನಿರ್ಮಾಣ ಮಾಡುವ ಸಂದರ್ಭದಲ್ಲಿ ನಿರಾಶ್ರಿತರಾಗಿರುವವರ ಬಗ್ಗೆ ಕುರಿತು ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ಅಂದರೆ, ಜನವರಿ 31ನೇ ತಾರೀಖಿನ ದಿನ ಉತ್ತರ ಕನ್ನಡ ಜಿಲ್ಲೆಯ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಈ ಎಲ್ಲ ಬೇಡಿಕೆ ಕುರಿತಂತೆ ಒಂದು ಸಭೆ ಮಾಡಲಾಗಿದೆ. ಆ ಸಭೆಯಲ್ಲಿ ಪುನರ್ವಸತಿ ಕೆಂದ್ರಗಳನ್ನು ಈ ಹಿಂದೆಯೇ ಜಿಲ್ಲಾಪಂಚಾಯತ್ ಕಾರವಾರಕ್ಕೆ ನಿರ್ವಹಣೆಗಾಗಿ ಹಸ್ತಾಂತರಿಸ ಲಾಗಿರುವ ಅಂಶ ಕೂಡ ಪ್ರಸ್ತಾಪಿಸಲಾಗಿದೆ. ಆದರೂ ಕೂಡ ಈ ಪ್ರದೇಶದಲ್ಲಿ ಅವಶ್ಯಕತೆ ಇರುವ ರಸ್ತೆ, ಸೇತುವೆಗಳನ್ನು ಮಾಡುವುದಕ್ಕೋಸ್ಕರ ಅರಣ್ಯ ಇಲಾಖಾ ಅಧಿಕಾರಿಗಳ ಪರಿಶೀಲನಾ ಕಾರ್ಯವನ್ನು ಕೈಗೊಳ್ಳಬೇಕೆಂದು ತೀರ್ಮಾನ ಕೈಗೊಳ್ಳಲಾಗಿದೆ. ಒಟ್ಟಿನಲ್ಲಿ ಆ ಪುರ್ನವಸತಿ ಕೇಂದ್ರದಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ ಒಂದು ಕ್ರಿಯಾ ಯೋಜನೆಯನ್ನು ತಯಾರಿಸಿ ಅದರಂತೆ ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕೆಂದು ತೀರ್ಮಾನ ಕೈಗೊಂಡಿದೆ. ಆದ್ದರಿಂದ, ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ನ ಕ್ರಿಯಾ ಯೋಜನೆಯಲ್ಲಿ ಇದನ್ನು ತೆಗೆದುಕೊಂಡು ಈ ಕೆಲಸ ಮಾಡಬೇಕೆಂದು ಸೂಚನೆ ಕೊಟ್ಟಿದ್ದೇವೆ.

ಶ್ರೀ ಸುನೀಲ್ ಎ ಹೆಗಡೆ : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಡಿ.ಸಿ. ಅಧ್ಯಕ್ಷತೆಯಲ್ಲಿ ಒಂದು ಸಭೆ ಆಗಬೇಕಾಗುತ್ತದೆ. ಆದ್ದರಿಂದ, ಸಭೆ ಮಾಡುವುದಕ್ಕೆ ಜಿಲ್ಲಾಧಿಕಾರಿಯವರಿಗೆ ಡೈರೆಕ್ಷನ್ ಕೊಟ್ಟು ಆ ಸಭೆಯ ವರದಿಯನ್ನು ತರಸಿಕೊಳ್ಳಬೇಕೆಂದು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಮೂಲಭೂತ ಸೌಕರ್ಯ ಕಲ್ಪಿಸುವುದರ ಬಗ್ಗೆ ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ. ತಾವು ಈಗ ಹೊಸದಾಗಿ ಪ್ರಸ್ತಾಪ ಮಾಡಿರುವ ಪ್ರಕಾರ ಜಿಲ್ಲಾಧಿಕಾರಿಯರಿಗೆ ಸೂಚನೆ ಕೊಟ್ಟು ಆ ಬಗ್ಗೆ ಕೂಡ ಸಭೆ ಮಾಡುವುದಕ್ಕೆ ಹೇಳುತ್ತೇವೆ.

8) ವಿಷಯ : ಹಾಸನ ಜಿಲ್ಲೆ, ಸಕಲೇಶಪುರ ತಾಲ್ಲೂಕಿಗೆ 70 ಗ್ರಾಮಗಳಿಗೆ ನೈಸರ್ಗಿಕ ನೀರನ್ನು ಕುಡಿಯುವ ಉದ್ದೇಶಕ್ಕಾಗಿ ನೀಡಲು ರೂ.12 ಕೋಟಿ ಅಂದಾಜು ತಯಾರಿಸಿ ಸಲ್ಲಿಸಿದ್ದು, ಬಹುಹಳ್ಳಿಗಳ ಯೋಜನೆಯಲ್ಲಿ ಮಂಜೂರಾತಿ ಮಾಡುವ ಬಗ್ಗೆ

ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಸಕಲೇಶಪುರ) : ಹಾಸನ ಜಿಲ್ಲೆ, ಸಕಲೇಶಪುರ ತಾಲ್ಲೂಕಿಗೆ 70 ಗ್ರಾಮಗಳಿಗೆ ನೈಸರ್ಗಿಕ ನೀರನ್ನು ಕುಡಿಯುವ ಉದ್ದೇಶಕ್ಕಾಗಿ ನೀಡಲು ರೂ.12 ಕೋಟಿ ಅಂದಾಜು ತಯಾರಿಸಿ ಸಲ್ಲಿಸಿದ್ದು, ಬಹುಹಳ್ಳಿಗಳ ಯೋಜನೆಯಲ್ಲಿ ಮಂಜೂರಾತಿ ಮಾಡುವ ಬಗ್ಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ,

ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕಿನ ಕುಡಿಯುವ ನೀರಿನ ಸಮಸ್ಯೆ ಇರುವ ಸುಮಾರು 70 ಗ್ರಾಮಗಳಿಗೆ ನೈಸರ್ಗಿಕ ಜಲಧಾರೆಯಿಂದ ಕುಡಿಯುವ ನೀರು ಒದಗಿಸಲು ರೂ.10.88 ಕೋಟಿಗಳಲ್ಲಿ ಒಂದು ರೇಖಾ ಅಂದಾಜನ್ನು ಫೆಬ್ರವರಿ–2012 ರಲ್ಲಿ ಹಾಸನ ಜಿಲ್ಲಾ ಪಂಚಾಯತ್ ತಯಾರಿಸಿದೆ. ನೈಸರ್ಗಿಕ ಜಲಧಾರೆಯಿಂದ ಹರಿಯುವ ನೀರು ಜನರಿಗೆ ಕುಡಿಯಲು ಯೋಗ್ಯವಾಗಿರುತ್ತದೆ. ದಿನದ 24 ಗಂಟೆಗಳೂ ಸಹ ನೀರನ್ನು ಸರಬರಾಜು ಮಾಡಬಹುದಾಗಿದ್ದು ವಿದ್ಯುತ್ ಅವಶ್ಯಕತೆ ಇರುವುದಿಲ್ಲ. ಸದರಿ ನೈಸರ್ಗಿಕ ಜಲಧಾರೆಗಳಿಂದ ಶಾಶ್ವತ ಕುಡಿಯುವ ನೀರು ವ್ಯವಸ್ಥೆ ಕಲ್ಪಿಸುವ